ಶ್ರೀ ಐ.ಎಂ. ಜಯರಾಮ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ನಮ್ಮ ಬೈಂದೂರು ಕ್ಷೇತ್ರದಲ್ಲಿ ಕೆಲವು ರಸ್ತೆಗಳಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥೆ ಸರಿಯಾಗಿಲ್ಲ. ಅಲ್ಲಿ ಸರಿಯಾದ ಸಮಯಕ್ಕೆ ಬಸ್ಸುಗಳು ಗ್ರಾಮಾಂತರ ಪ್ರದೇಶಕ್ಕೆ ಹೋಗದೇ ಇರುವುದರಿಂದ ಅಲ್ಲಿಯ ಕಾಲೇಜು ಮತ್ತು ಶಾಲೆಯ ಮಕ್ಕಳಿಗೆ ತುಂಬಾ ಉಪದ್ರವ ಆಗುತ್ತಿದೆ. ಅದೂ ಅಲ್ಲದೇ ಬೈಂದೂರು ದಕ್ಷಣ ಕನ್ನಡ ಜಿಲ್ಲೆಯಲ್ಲಿನ ಒಂದು ಮುಖ್ಯ ಕ್ಷೇತ್ರವಿದ್ದು ಅಲ್ಲಿ ಹೆಚ್ಚು ಕಡಿಮೆ ನೂರು ಬಸ್ಸುಗಳು ಓಡಾಡಿದರೂ ಸಹಿತ ನಮ್ಮ ಬೈಂದೂರು ಕ್ಷೇತ್ರದಿಂದ ಒಂದು ಬಸ್ಸೂ ಸಹಿತ ಬೆಂಗಳೂರಿಗೆ ಬರುವಂಥದ್ದಿಲ್ಲ. ಇದರ ಬಗ್ಗೆ ನಾನು ಎರಡು ಮೂರು ಸಾರಿ ಕಾಗದ ಬರೆದೆ ಅದಕ್ಕೆ ಸರಿಯಾದ ವ್ಯವಸ್ಥೆ ಮಾಡದಿರುವುದರಿಂದ ನಮ್ಮ ಬೈಂದೂರು ಕ್ಷೇತ್ರಕ್ಕೆ ಈ ಕೆ.ಎಸ್.ಆರ್.ಟಿ.ಸಿ. ಯಿಂದ ತುಂಬಾ ಅನ್ಯಾಯವಾಗುತ್ತದೆ ಎಂದು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಆ ವಿಚಾರವಾಗಿ ಪರಿಶೀಲಿಸಿ ಸೂಕ್ತ ವ್ಯವಸ್ಥೆ ಮಾಡಲಾಗುತ್ತದೆ.

**ವಿಜಾಪುರ ಜಿಲ್ಲೆಯಲ್ಲಿರುವ ಸಾರಿಗೆ ಚೆಕ್‌ಪೋಸ್ಟಿಂದ ವಾರ್ಷಿಕ ಆದಾಯ**

2408 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ವಿಜಾಪುರ ಜಿಲ್ಲೆಯಲ್ಲಿರುವ ಸಾರಿಗೆ ಚೆಕ್ ಪೋಸ್ಟಿಂದ ವಾರ್ಷಿಕ ಆದಾಯವೆಷ್ಟು?*

*ಆ) ಈ ಚೆಕ್‌ಪೋಸ್ಟಿಂದ ಸರ್ಕಾರಕ್ಕೆ ಬರುವ ಆದಾಯದಲ್ಲಿ ಸೋರಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಇ) ಬಂದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ವಿಜಾಪುರ ಜಿಲ್ಲೆಯಲ್ಲಿ ಝುಳ್ಳಿಯಲ್ಲಿರುವ ಸಾರಿಗೆ ಇಲಾಖೆಯ ಚೆಕ್‌ಪೋಸ್ಟಿಂದ 1994-95ನೇ ಸಾಲಿನಲ್ಲಿ ರೂ. 1,70,76,435-00 ವಾರ್ಷಿಕ ಆದಾಯ ಬಂದಿರುತ್ತದೆ.

ಆ) ಇಲ್ಲ

ಇ) ಹೌದು.

ಶ್ರೀ ಬಸನಗೌಡ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯ ಜಳಕಿ ಚೆಕ್‌ಪೋಸ್ಟಿಂದ ಒಂದು ಕೋಟಿ ಎಪ್ಪತ್ತು ಲಕ್ಷ ರೂಪಾಯಿ ಸಾರಿಗೆ ಆದಾಯ ಬಂದಿದೆ. ಎಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಅಲ್ಲಿ ನಡೆಯುತ್ತಿರುವಂಥ ಭ್ರಷ್ಟಾಚಾರ ಹಾಗೂ ಅವ್ಯವಹಾರದ ಬಗ್ಗೆ ಏನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದಕ್ಕೆ "ಇಲ್ಲ" ಎಂದು ಉತ್ತರ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ಒಂದು ಚೆಕ್ ಪೋಸ್ಟ್ ಭ್ರಷ್ಟಾಚಾರದ ವೈಪರೀತ್ಯ ಮುಟ್ಟಿದೆ. ಇದರಿಂದ ಸರ್ಕಾರಕ್ಕೆ ಬರುವಂಥ ಸುಮಾರು ಒಂದು ಲಕ್ಷ ರೂಪಾಯಿನಷ್ಟು ಆದಾಯದಲ್ಲಿ ಸೋರಿಹೋಗುವಂಥ ಕೆಲಸವನ್ನು ಅಲ್ಲಿನ ಅಧಿಕಾರಿಗಳು ಮಾಡುತ್ತಿದ್ದಾರೆ. ಅಲ್ಲಿಯ ಅಧಿಕಾರಿಗಳು ಅನಧಿಕೃತವಾಗಿ ನಮ್ಮ ರಾಜ್ಯದಲ್ಲಿ ನುಸುಳಿ ಬರುತ್ತಿರುವ ವಾಹನಗಳನ್ನು ತಡೆಯದೆ ಬಿಡುತ್ತಾರೆ. ಅದಕ್ಕೆ ಪರ್ಮಿಟ್ ಸಹ ಇರುವುದಿಲ್ಲ. ಹಾಗೂ ಆ ವಾಹನಗಳಲ್ಲಿ ವಿಶೇಷವಾಗಿ ಅತೀ ಭಾರವಿದ್ದು ಓವರ್ ಟನ್ನೇಜ್ ಇದ್ದು ನಮ್ಮ ರಾಜ್ಯದ ಅನೇಕ ಸೇತುವೆಗಳು, ಹಾಗೂ ರಸ್ತೆಗಳು ಕೆಡಲಿಕ್ಕೆ ಕಾರಣವಾಗಿದೆ. ಅದಕ್ಕೆ ಅನೇಕ ನಿದರ್ಶನಗಳಿವೆ. ಸುಮಾರು ಹತ್ತು ಟನ್ ಭಾರವನ್ನು ಹಾಕಬೇಕು ಎಂದು ನಿಯಮವಿದ್ದರೂ ಸಹಿತ ಸುಮಾರು ಹದಿನೈದರಿಂದ ಇಪ್ಪತ್ತು ಟನ್ ಹಾಕಿಕೊಂಡು ಬರುವಂಥ ಬೇರೆ ರಾಜ್ಯದ ವಾಹನಗಳಿಂದ ಹಾನಿಯಾಗುತ್ತಿದ್ದರೂ

ಸಹಿತ, ಲೈಸೆನ್ಸ್ ಇಲ್ಲದೆ ಅನೇಕ ವಾಹನಗಳು ಇವೊತ್ತು ನಮ್ಮ ರಾಜ್ಯದಲ್ಲಿ ಬರುವುದರ ಮುಖಾಂತರ ಭ್ರಷ್ಟಾಚಾರ ಅಲ್ಲಿ ನಡೆದಿದೆ. ಅದಕ್ಕೆ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಮತ್ತು ತಪಾಸಣಾ ಕೇಂದ್ರ ಎಲ್ಲಿ ಇರುತ್ತದೆ ಅದರ ನಂತರ ವಿಚಕ್ಷಣ ದಳಗಳನ್ನು ಅನೇಕ ರಸ್ತೆಗಳಲ್ಲಿ ಇಟ್ಟರೆ ಆ ರೀತಿ ಬರುವಂಥ ವಾಹನಗಳನ್ನು ಪರೀಕ್ಷೆ ಮಾಡಿದಾಗ ಸರ್ಕಾರಕ್ಕೆ ಸೋರಿ ಹೋಗುವಂಥ ಹಣವನ್ನು ಹಿಡಿಯಲು ಸಾಧ್ಯವಿದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವಂಥ ಮಾತು ಪೂರ್ಣ ಸತ್ಯವೆಂದು ಹೇಳದಿದ್ದರೂ ಸಹ ಇಂತಹ ವಿಚಾರದಲ್ಲಿ ನಾವು ಈಗ ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ರೆಗ್ಯೂಲರ್ ಚೆಕ್ ಅಲ್ಲದೇ ತಾವು ಹೇಳಿದ ಹಾಗೆ ವಿಚಕ್ಷಣ ದಳಗಳನ್ನೂ ಸಹ ನೇಮಿಸಿದ್ದೇವೆ. ಚೆಕ್ ಪೋಸ್ಟ್ಗಳಲ್ಲಿ ಅವರು ಏನಾದರೂ ವ್ಯವಹಾರ ಮಾಡಿ ಹೊರಗೆ ಬಂದರೆ ಮಧ್ಯದಲ್ಲಿ ಮತ್ತೆ ಅವರ ಮೇಲೆ ಚೆಕ್ ಆಗುವುದರಿಂದ ಹೆಚ್ಚು ತಪ್ಪಿಸಿಕೊಂಡು ಹೋಗುವುದಕ್ಕೆ ಅವಕಾಶ ಇರುವುದಿಲ್ಲ. ಆದರೂ ತಾವು ಹೇಳುವಂಥ ವಿಚಾರದಲ್ಲಿ ಇನ್ನೂ ಹೆಚ್ಚಿನ ಕ್ರಮ ತೆಗೆದುಕೊಂಡು ಪರ್ಮಿಟ್ ಇಲ್ಲದೆ ಓಡಾಡುವ ಬಸ್ಸುಗಳ ಮೇಲೆ ಅಥವಾ ಪರ್ಮಿಟ್ ಕಂಡೀಷನ್ಸ್ ಮುರಿದಂಥ ಬಸ್ಸುಗಳ ಮೇಲೆ ಈಗಾಗಲೇ ನಾವು ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಹಾಗೂ ಅದರಿಂದ ಒಂಭತ್ತು ಕೋಟಿ ದಂಡದ ರೂಪದಲ್ಲಿ ವಸೂಲು ಮಾಡಿದ್ದೇವೆ. ಇದರಿಂದ ತಮಗೆ ಕಲ್ಪನೆ ಆಗಬಹುದು ನಾವು ಯಾವ ರೀತಿ ಕ್ರಮ ಕೈಗೊಳ್ಳುತ್ತಿದ್ದೇವೆಂದು. ಇನ್ನೂ ಹೆಚ್ಚು ಪ್ರಬಲವಾಗಿ ಚೆಕ್ಪೋಸ್ಟ್ಗಳಲ್ಲಿ ಹಾಗೂ ಮಧ್ಯದಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ಸರಿಪಡಿಸಲಿಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲು ನಮ್ಮ ಡಿಪಾರ್ಟ್ಮೆಂಟ್ನವರಿಗೆ ಸೂಕ್ತ ಆದೇಶ ನೀಡುತ್ತೇನೆ.

ಅಧ್ಯಕ್ಷರು : ಡಾ ಯು. ಚಿತ್ತರಂಜನ್ರವರ ಪ್ರಶ್ನೆಯನ್ನು ಅವರ ಪರವಾಗಿ ಶ್ರೀ ಸದಾನಂದಗೌಡರವರು ಕೇಳುತ್ತಾರೆ.

**ಸಹಕಾರಿ ಸಂಘಗಳ ಚುನಾವಣೆಗಳು.**

2455 - ಡಾ|| ಯು. ಚಿತ್ತರಂಜನ್ (ಭಟ್ಕಳ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಅನೇಕ ಸಹಕಾರಿ ಸಂಘಗಳು ಈಗಾಗಲೇ ಚುನಾವಣೆ ಪ್ರಕ್ರಿಯೆ ಪ್ರಾರಂಭಿಸಿ ದಿನಾಂಕಗಳನ್ನು ಕೂಡಾ ಪ್ರಕಟಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಕೊನೆಯ ಗಳಿಗೆಯಲ್ಲಿ ಎಲ್ಲಾ ಚುನಾವಣೆಗಳನ್ನು ಮುಂದೂಡುವ ವಿಚಾರ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ?*

*ಇ) ಈ ಚುನಾವಣೆಗಳು ಕ್ಲುಪ್ತ ಸಮಯಕ್ಕೆ ನಡೆಯುವಂತೆ ಸರ್ಕಾರ ಭರವಸೆ ನೀಡಿ ಕ್ರಮ ಕೈಗೊಳ್ಳುವುದೇ?*

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಹೌದು

ಆ) ಸರ್ಕಾರವು ಈಗಾಗಲೇ ಅಧಿಸೂಚನೆ ಸಂಖ್ಯೆ ಸಿಎಂಡಬ್ಲ್ಯೂ 118, ಸಿಎಲ್ಎಂ 95, ದಿನಾಂಕ 30-08-1995 ಮತ್ತು ಇದೇ ಸಮ ಸಂಖ್ಯೆಯ ತಿದ್ದುಪಡಿ ದಿನಾಂಕ 31-08-1995ರಲ್ಲಿ ಸಹಕಾರ ಸಂಘಗಳ ಚುನಾವಣೆಗಳನ್ನು ಮುಂದೂಡಿ ದಿನಾಂಕಗಳನ್ನು ನಿಗಧಿಪಡಿಸಿದೆ.

ಇ) ಸರ್ಕಾರಿ ಅಧಿಸೂಚನೆ ಸಂಖ್ಯೆ ಸಿಎಂಡಬ್ಲ್ಯೂ 118 ಸಿಎಲ್ಎಂ 95, ದಿನಾಂಕ 30-08-1995ರಲ್ಲಿ ವಿವಿಧ ವರ್ಗಗಳ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆ